Motion to pass

Sri V. L. Patil (Minister for Revenue).— Sir, I beg to move :

"That the Karnataka Agricultural Credit Pass Book Bill, 1984 be passed."

Mr. Speaker.— The question is :

"That the Karnataka Agriculture Credit Pass Book Bill, 1984 be passed."

The Motion was adopted and the Bill was passed

9. Personal explanation by the Minister

ವಿಷಯ : ಮಂತ್ರಿಯವರ ಮನೆಗೆ ಸರ್ಕಾರ ಖರ್ಚು ಮಾಡಿದ ಬಗ್ಗೆ.

ಶ್ರೀ ಎ ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇದನ್ನು ತೆಗೆದುಕೊಳ್ಳುವುದಕ್ಕೆ ಮೊದಲು ನನ್ನದೊಂದು ಸ್ವಂತ ಹೇಳಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳವರು, ಮಂತ್ರಿಗಳು ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದರ ಬಗ್ಗೆ ಶ್ರೀ ರಾಮದೇವ್ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನನ್ನ ಬಗ್ಗೆ ವಿಚಾರ ಬಂದಾಗ ಮಂತ್ರಿಗಳ ಗೃಹಗಳನ್ನು ಸಜ್ಜುಗೊಳಿಸುವ ಸಂಬಂಧದಲ್ಲಿ ಆಗಿರುವ ಖರ್ಚು 1,291 ರೂಪಾಯಿಗಳೆಂದು ಹೇಳಿದ್ದಾರೆ. ಇದನ್ನು ನಾನು ಆಮೇಲೆ ವಿಚಾರಿಸಿದಾಗ ನನ್ನ ವ.ನೆಯನ್ನು ಸಜ್ಜುಗೊಳಿಸುವುದಕ್ಕೆ ಒಂದು ಹಂಚಿಕಡ್ಡಿಯನ್ನು ಸಹ ಖರೀದಿಸಿಲ್ಲ. ಸರ್ಕಾರದ ಒಂದು ವಸ್ತುವನ್ನು ಸಹ ಮನೆಯನ್ನು ಸಜ್ಜುಗೊಳಿಸುವುದಕ್ಕೆ ಉಪಯೋಗಿಸಿಲ್ಲ. ಆದರೆ 1,291 ರೂಪಾಯಿಗಳು ಹೇಗೆ ಬಂತು ಎಂದು ಆಫೀಸಿನಲ್ಲಿ ಕೇಳಿದಾಗ ಒಂದು ಟಿಫಿನ್ ಕ್ಯಾರಿಯರ್, ಒಂದು ಥರ್ಮಾಫ್ಲಾಸ್ಕ್, ಟೀ ಕಪ್ಪುಗಳು ಸ್ಪೂನುಗಳು, ಟಂಬ್ಲರ್ಸ್ ಇವೆಲ್ಲಾ ಪಿಡಬ್ಲ್ಯೂಡಿ ಇಲಾಖೆಯಿಂದ ನನ್ನ ಕಚೇರಿಗೆ ಒದಗಿಸಿದ್ದಾರೆ. ನನ್ನ ಮನೆಗೆ ಸರ್ಕಾರದ ಯಾವ ವಸ್ತುವನ್ನು ತೆಗೆದುಕೊಂಡು ಹೋಗಿಲ್ಲ. ಇವೆಲ್ಲಾ ನನ್ನ ಆಫೀಸ್ ನಲ್ಲಿವೆ. ನಾನು ಹೋಗುವಾಗ ಇವನ್ನು ಅಲ್ಲಿಯೇ ಬಿಟ್ಟು ಹೋಗುತ್ತೇನೆ. ನನ್ನದು ಸ್ವಂತ ಮನೆಯಲ್ಲ, ಬಾಡಿಗೆ ಮನೆಯಲ್ಲಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅಧಿಕಾರಿಗಳ ಮನೆ ಗುಡಿಸುವುದಕ್ಕೆ ಪೊರಕೆ ಬೇಡವೇ ? ಟೀ-ಕಪ್ಸ್ ಬೇಡವೇ ?

ಅಧ್ಯಕ್ಷರು.—ನೀವು ಅವರ ಮನೆಗೆ ಹೋದರೆ ಟೀ ಕೂಡ ಕೊಡುವುದಿಲ್ಲ.

The Karnataka Mineral Rights Tax Bill, 1984

Motion to consider

Sri A. Lakshmisagar.— Sir I beg to move :

"That the Karnataka Mineral Rights Tax Bill, 1984 be taken into consideration".

The question was proposed

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಪ್ರಕೃತಿದತ್ತವಾದ ಖನಿಜಗಳನ್ನು ಬಹಳ ಅಗ್ಗದ ಬೆಲೆಗೆ ಯಾರ್ಯಾರೂ ಪರವಾನಿಗೆ ತೆಗೆದುಕೊಂಡಿದ್ದಾರೆ, ಅವರು ಅದನ್ನು ವಿದೇಶಗಳಿಗೆ ರಫ್ತು ಮಾಡುತ್ತಿರುವುದರಿಂದ ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಬರಬೇಕಾದಂಥ ತೆರಿಗೆಯಲ್ಲಿ ಕಡಿತವಾಗಿದೆ ಮತ್ತು ಕಡಿಮೆಯಾಗಿದೆ ಇದನ್ನು ತುಂಬಿಸಿಕೊಳ್ಳುವುದಕ್ಕೋಸ್ಕರವಾಗಿ ಅವರ ಮೇಲೆ ತೆರಿಗೆ ಹಾಕತಕ್ಕ ಅಧಿಕಾರವನ್ನು ಸರ್ಕಾರ ತೆಗೆದುಕೊಂಡಿದೆ ಈ ತೆರಿಗೆಯನ್ನು ಹಾಕುವ ಸಮಯದಲ್ಲಿ ಅವರಿಗೆ ನೋಟೀಸನ್ನು ಕೊಡುತ್ತೆವೆ. ಅದಕ್ಕೆ ಅವರು 30 ದಿನಗಳೊಳಗಾಗಿ ಉತ್ತರ ಕೊಡದೇ ಹೋದರೆ ಅವರು ತೆರಿಗೆಯನ್ನು ಕೊಡಬೇಕಾಗುತ್ತದೆ. ಯಾರಿಗಾದರೂ ನೋಟೀಸ್ ಸರಿಯಾದ ಸಮಯಕ್ಕೆ ಮುಟ್ಟಿಲ್ಲವೆಂದರೂ ಅವರು ಅಪೀಲ್ ಮಾಡಿಕೊಳ್ಳಬಹುದು. ಕಾಲಮಿತಿಯೊಳಗೆ ಆರ್ಡರ್ ಪಾಸ್ ಆದ ಮೇಲೂ ರಿವಿಜನ್‌ಗೆ ಅವಕಾಶ ಇದೆ "The legality, proprietv of such an order is also permitted to be questioned" ಇದರಿಂದ ಸರ್ಕಾರಕ್ಕೆ ಆದಾಯ ಬರತಕ್ಕ ಒಂದು ವಿಧೇಯಕವಾಗಿದೆ. ಸುಮಾರು 5 ಕೋಟಿ ರೂಪಾಯಿಗಳು ಆದಾಯ ಬರತಕ್ಕಂಥ ನಿರೀಕ್ಷಣೆ ಇದೆ. ಆದುದರಿಂದ ಇದು ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ್ದು ನಮ್ಮ ರಾಜ್ಯದ ಪ್ರಕೃತಿಯ ಸಂಪತ್ತನ್ನು ಬಹಳ ಕನಿಷ್ಠ ಬೆಲೆಗೆ ನಮ್ಮಿಂದ ತೆಗೆದುಕೊಂಡು ಕೋಟಿಗಟ್ಟಲೆ ರೂಪಾಯಿ ಸಂಪಾದನೆ ಮಾಡತಕ್ಕ ಅವ್ಯವಹಾರ ಇಲ್ಲಿ ನಡೆದಿದೆ. ಆದುದರಿಂದ ಸರ್ಕಾರಕ್ಕೆ ನ್ಯಾಯವಾಗಿ ಈ ರಾಜ್ಯದ ಜನತೆಗೆ ಪ್ರಕೃತಿದತ್ತವಾದ ಐಶ್ವರ್ಯದಿಂದ ಸ್ವಲ್ಪ ಭಾಗವಾದರೂ ಬರಲಿ ಎನ್ನುತಕ್ಕ ಪ್ರಯತ್ನ ಇದಾಗಿದೆ. ಇದಕ್ಕೆ ಮಾನ್ಯ ಸಭೆಯು ಒಪ್ಪಿಗೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.— ಅಧ್ಯಕ್ಷರೇ, ಇದನ್ನು ಸ್ವಾಗತ ಮಾಡುತ್ತಾ ಒಂದು ಮಾತು ಹೇಳ ಬೇಕಾಗಿದೆ. ನಮ್ಮ ದೇಶದಲ್ಲಿ ಅದರಲ್ಲೂ ಉತ್ತಮವಾದ ಖನಿಜ ಸಿಕ್ಕಾಗ ಸರ್ಕಾರದ ಮೇಲೆ ಸಾಕಷ್ಟು ಪ್ರಭಾವ ಬೀರಿ ನಮಗೆ ನಷ್ಟ ಉಂಟು ಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಬ್ಲಾಕ್ ಸ್ಟೋನ್ ಸಿಗುತ್ತದೆ. ದಿನಾ ಈ ಸ್ಟೋನ್ 3 ಲಾರಿ 4 ಲಾರಿ ಟನ್‌ಗಳಷ್ಟು ಮಂಗ ಳೂರು ಪೋರ್ಟಿನಲ್ಲಿ ಬೀಳುತ್ತಿದೆ. ಅಲ್ಲಿಂದ ಅದು ಇಟಲಿಗೆ ಹೋಗುತ್ತಿದೆ. ಈ ಕಲ್ಲನ್ನು ಒಡೆಯುವವರಿಗೆ ಸಿಕ್ಕತಕ್ಕ ಕೂಲಿ ಮತ್ತು ನಮ್ಮ ಸರ್ಕಾರಕ್ಕೆ ಸಿಗತಕ್ಕವ್ಯ ಸೇರಿ 10 ರೂಪಾಯಿಗಳಾದರೆ. ಅವರು 10 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಹಿಂದೆ ಕೂಡ ಈ ಸಭೆ ಪ್ರಾರ್ಥನೆ ಮಾಡಿ ಇದನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ. ಹಿಂದಿನ ಸರ್ಕಾರದವರು 10 ವರ್ಷ 15 ವರ್ಷಗಳವರೆಗೆ ಕಂಟ್ರಾಕ್ಟನ್ನು ಕೊಟ್ಟಿದ್ದಾರೆ. ಇದರಿಂದ ನಮ್ಮ ರಾಜ್ಯದಲ್ಲಿರತಕ್ಕ ಖನಿಜ ಸಂಪತ್ತೆಲ್ಲಾ ನಿರ್ನಾಮವಾಗತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಅಮೂಲ್ಯವಾದ ಖನಿಜ ಸಂಪತ್ತನ್ನು ಕೆಲವರಿಗೆ ನೂರು ಏಕರೆ. ಸಾವಿರ ಎಕರೆ ಕಂಟ್ರಾಕ್ಟ್ ಕೊಟ್ಟುಬಿಟ್ಟಿದ್ದಾರೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಕೊರಾಂಡಂ, ಜಿಪ್ಸಂ ಸಿಗುತ್ತಿದೆ. ಇಂಥಾದ್ದೆಲ್ಲಾ ಹೊರಗಡೆ ಹೋಗುತ್ತಿದೆ. ಈಗ ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದೀರಿ ಎನ್ನುವ ಕಾರಣಕ್ಕೆ ಅವರನ್ನು ಬಿಟ್ಟು ಮುಂದೆ ಬರುವವರಿಗೆ ಈ ಕಾನೂನು ಅನ್ವಯಿಸಿ ದರೆ ಪ್ರಯೋಜನ ಆಗುವುದಿಲ್ಲ. ರಾಜ್ಯಕ್ಕೆ ತೆರಿಗೆ ಬರುವ ದೃಷ್ಟಿಯಿಂದ ಈಗಿರತಕ್ಕ ಕಂಟ್ರಾಕ್ಟರ್ಸ್‌ಗೂ ಕೂಡಾ ಅನ್ವಯ ಮಾಡಬೇಕೆಂದು ಹೇಳಿ, ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ —ಅವರಿಗೂ ಅನ್ವಯಿಸುತ್ತದೆ. ಇದರಲ್ಲಿ ಇನ್ನೊಂದು ವಿಚಾರ ಮಾನ್ಯ ಗಂಗಾಧರ್ ಅವರಿಗೆ ಹೇಳುವುದೇನೆಂದರೆ, ಕೇಂದ್ರ ಸರಕಾರದ ಅಧಿಕಾರ ಇದರಲ್ಲಿದೆ. ಅದರ ಮಿತಿ ಯೊಳಗೆ ನಾವು ನಮ್ಮ ಅಧಿಕಾರವನ್ನು ಚಲಾಯಿಸಬೇಕಾದ್ದಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಈಗಿರತಕ್ಕಂಥವರಿಗೂ ಇದು ಅನ್ವಯಿಸುವುದು

ಶ್ರೀ ಹೆಚ್. ಜಿ. ಚೆನ್ನಪ್ಪ.— ಈ ವಿಷಯದಲ್ಲಿ ನನ್ನದೊಂದು ಸಲಹೆ ಏನೆಂದರೆ, ಸಿಕ್ಕಾಪಟ್ಟೆ ಕಲ್ಲುಗಳು ನಮ್ಮ ದೇಶದಿಂದ ಹೊರಗಿನ ದೇಶಕ್ಕೆ ಹೋಗುತ್ತಿದೆ. ಇದು ಬದಲಾವಣೆ ಆಗಬೇಕು. ಕೆಲವರು ಕ್ವಾರಿಯನ್ನು 100–200 ರೂಪಾಯಿಗೆ ಕಂಟ್ರಾಕ್ಟ್ ತೆಗೆದುಕೊಂಡು, ಅವರು ಸಾವಿರಾರು ರೂಪಾಯಿಗಳಿಗೆ ಮಾರಿಕೊಳ್ಳುತ್ತಿದ್ದಾರೆ. ಅದನ್ನು ಸರಕಾರದ ಪರಕ್ಕೆ ತೆಗೆದುಕೊಂಡು ಹೆಚ್ಚಿನ ಬೆಲೆ ಯನ್ನು ಫಿಕ್ಸ್ ಮಾಡಿದರೆ ಹೆಚ್ಚಿನ ಲಾಭ ನಮ್ಮ ದೇಶಕ್ಕೆ ಬರುತ್ತದೆ. ಯಾವ ಯಾವ ತಾಲ್ಲೂಕುಗಳಲ್ಲಿ ಕಲ್ಲುಗಳು ಸಿಗುತ್ತಿದೆಯೋ, ಆಯಾ ತಾಲ್ಲೂಕುಗಳಿಗೇ ಹಣವನ್ನು ಕೊಡುವುದಾದರೆ ಹೆಚ್ಚಿನ ಪ್ರಗತಿ ಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನ ದಲ್ಲಿಟ್ಟುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅವರ ಅಭಿಪ್ರಾಯ ಸ್ವಾಗತಾರ್ಹವಾದುದು.

ಶ್ರೀ ಚೌಡರೆಡ್ಡಿ. ನಮ್ಮಲ್ಲಿ ಸಾರಾಯಿ ಮಾಡತಕ್ಕ ಕಾರ್ಖಾನೆ ಇದೆ. ಅದನ್ನು ಈಗ ಕೋಲಾರ ಜಿಲ್ಲೆಯವರು 20 ಲಕ್ಷಕ್ಕೆ ಕೊಂಡುಕೊಳ್ಳುವುದಕ್ಕೆ ತಯಾರಿದ್ದಾರೆ ಆದರೆ ನಾಲ್ಕು ಲಕ್ಷ ಎಂಬತ್ತು ಸಾವಿರಕ್ಕೆ ಕೊಟ್ಟಿದ್ದಾರೆ. ಇದರಿಂದ ರೈತರಿಗೆ ನಷ್ಟವಾಗುತ್ತಿದೆ. ಆದುದರಿಂದ ಅದನ್ನು ಸೇರಿಸುವುದಕ್ಕೆ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಹೆಚ್ ಡಿ ಚೌಡಯ್ಯ. ಸನ್ಮಾನ್ಯ ಅಧ್ಯಕ್ಷರೇ, ಈ ಲೈಮ್ ಕ್ವಾರಿ ಮತ್ತು ಗ್ರಾನೈಟ್, ಅದೆಬಂಜೆಗಳು ಇವೆಯಲ್ಲಾ ಇವನು ತಾಲ್ಲೂಕ್ ಬೋರ್ಡ್ ಮತ್ತು ಪುಚಾಯತಿ ಕಾಯಿದೆಯಲ್ಲಿ ಆಯಾ ಪಂಚಾಯತಿ ಸರಪದ್ದಿನ ವ್ಯಾಪ್ತಿಕ್ಕನ್ನು ಆಯಾ ಪಂಚಾಯತಿಗೆ ಅವರಿಗೆ ಆದಾಯ ಬರಲಿ ಎಂಬ ದೃಷ್ಟಿಯಿಂದ ಮಿಷಿಕೊಟ್ಟಿದ್ದರು. ಹಿಂದಿನ ಸರ್ಕಾರ ಇದನ್ನು ಮಿಷಿಕೊಂಡು ನೇರವಾಗಿ ತನ್ನ ಆಡಳಿತಕ್ಕೆ ತೆಗೆದುಕೊಂಡಿತು. ಈಗ ಪ್ರಸ್ತೋವ್ ಪಂಚಾಯಿತಿ ರಾಜ್ಯ ಬಿಲ್ ಏನಿದೆ ಅದರಲ್ಲಿ ಆಯಾ ಮಂಡಲ್ ಪಂಚಾಯಿತಿಗಳ ಸರಪದ್ದಿನಲ್ಲಿ ಬರತಕ್ಕಂಥ ಆಯಾ ಜಿಲ್ಲಾ ಪರಿಷತ್ತುಗಳ ಸರಪದ್ದಿನಲ್ಲಿ ಬರತಕ್ಕಂಥ ಲೈಮ್ ಕ್ವಾರೀಸ್ ಗ್ರಾನೈಟ್ ಬಂಡೆಗಳನ್ನು ಆಯಾ ಪುಚಾಯತ್ ಸಂಸ್ಥೆಗಳಿಗೇ ಕೊಡತಕ್ಕ ವ್ಯವಸ್ಥೆ ಇರಬಹುದು. ಇದರಿಂದ ಅವುಗಳ ರೆವಿನರೇಟೀವ್ ಆಸೆಟ್ಸ್ ಹೆಚ್ಚು ಮಾಡುವುದಕ್ಕೆ ಒಂದು ಅವಕಾಶ ಇರುತ್ತದೆ ಆದುದರಿಂದ ದಯವಿಟ್ಟು ನನ್ನ ಈ ಸಲಹೆಯನ್ನು ಪರಿಗಣಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೀರೋಜಿ ವಿ. ಎಸ್ ಲಾಡ್ (ಸುಡೂರು).— ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಗಂಗಾ ಧರ್ ಅವರು ಹೇಳಿದ ಪ್ರಕಾರ ನೋಡಿದರೆ ಬ್ಲಾಕ್ ಗ್ರಾನೈಟ್, ರೋಸ್ ಗ್ರಾನೈಟ್‌ನ್ನು ಇಂಡಿವಿಜ್ಯುಯಲ್ಸ್ ಎಕ್ಸ್‌ಪ್ಲಾಯಿಟ್ ಮಾಡುತ್ತಿರುವುದನ್ನು ನೋಡಿದರೆ ನಿಜವಾಗಿಯೂ ನಮ್ಮ ಕರ್ನಾಟಕ ಸರಕಾರಕ್ಕೆ ಸಾಕಷ್ಟು ಆದರಿಂದ ರಾಯಲ್ಟಿ ಬರುತ್ತದೆ. ಆದುದರಿಂದ ದಯವಿಟ್ಟು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಬ್ಲಾಕ್ ಗ್ರಾನೈಟ್ ಪಡೆಯುವ ಎಂ. ಎಂ. ಮಿಲ್ಲ ಅವರಿಂದ ನಮ್ಮ ಕರ್ನಾಟಕ ಸರಕಾರಕ್ಕೆ ಎಷ್ಟು ರಾಯಲ್ಟಿ ಬಂದಿದೆ, ಹಾಗೂ ಅಪ್ರೂವ್ಡ್ ಇಂಡಿವಿಜ್ಯುಯಲ್ಸ್‌ಗೆ

ಸಪ್ಲೈ ಮಾಡುವುದರಿಂದ ನಮ್ಮ ಕರ್ನಾಟಕ ಸರಕಾರಕ್ಕೆ ಎಷ್ಟು ಆದಾಯ ಬಂದಿದೆ ಎಂಬ ಬಗ್ಗೆ ಕನಿಷ್ಠ ಪಕ್ಷ ಒಂದು ಐದು ವರ್ಷದ ಸ್ಟೇಟ್‌ಮೆಂಟನ್ನು ಸದನದ ಮುಂದಿಟ್ಟರೆ ಇದರ ಬಗ್ಗೆ ವಿಚಾರಣೆ ಮಾಡಿ ಬಹುದು. ಎಂ.ಎಂ. ಮಿಲ್‌ಗೆ ಕೊಡುವುದು ಒಳ್ಳೆಯದೋ, ಅಥವಾ ಇಂಡಿವಿಜುಯಲ್ಸ್‌ಗೆ ಕೊಟ್ಟರೆ ಒಳ್ಳೆಯದೋ ಎಂದು ವಿಚಾರಣೆ ಮಾಡಬಹುದು.

ನಮ್ಮ ದೇಶಕ್ಕೆ ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ. ಎಂ. ಎಂ. ಮಿಲ್‌ಗೆ ಕೊಟ್ಟರೆ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಬ್ಲಾಕ್ ಗ್ರಾನೈಟ್ ಹಾಗೂ ಪಿಂಕ್ ಗ್ರಾನೈಟ್ ನಮ್ಮ ಕರ್ನಾಟಕದಲ್ಲಿ ಸಾಕಷ್ಟಿದೆ. ಆದನ್ನು ಇವತ್ತು ನ್ಯಾಶನಲೈಸ್ ಮಾಡಿದರೆ ಹಣಕಾಸು ರಾಯಲ್ಟಿ ಬರುತ್ತದೆ. ನಿಜವಾಗಿ ಫಾರಿನ್ ಎಕ್ಸ್‌ಚೇಂಜ್‌ನಿಂದ ನಮಗೆ ಬಹಳ ಹಣ ಬರುತ್ತದೆ. ಎಂ. ಎಂ. ಮಿಲ್‌ನಿಂದ ಮಾಡಿಸಿದರೆ ನಮ್ಮ ಕರ್ನಾಟಕಕ್ಕೆ ರಾಯಲ್ಟಿ ಬರುವುದಿಲ್ಲ, ಫಾರಿನ್ ಎಕ್ಸ್‌ಚೇಂಜ್ ಬರುವುದಿಲ್ಲ ಎಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ಮತ್ತೆ ಕೊರಂಡಂ ಮಿನರಲ್ಸ್ ಏನಿದೆ ಅಲ್ಲಿ ಇಂಡಿವಿಜುಯಲ್ಸ್‌ಗೆ ಲೀಸ್ ಕೊಟ್ಟಿದ್ದಾರೆ. ಅವರು ಸಂಗ್ರಹ ಮಾಡುತ್ತಿದ್ದಾರೆ. ಬಿಳಿ ಬಂಡೆ ರೈತರಿಗೆ ಮನೆ ಕಟ್ಟಲಿಕ್ಕೆ ಬೇಕಾಗುತ್ತದೆ. ಆ ಸಕ್ಕೆ ಎಕರೆಗೆ 400 ರೂಪಾಯಿ ಇತ್ತು ಇವತ್ತು 2500 ರೂಪಾಯಿ ಎಕರೆಗೆ ಮಾಡಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ, Contractor exploits the material and the cost will fall on the customer and thereby even for ordinary construction of the building, the cost of the material will go up. I therefore request to the Government the royalty or anything, should be reduced so that the common man should be benefitted. Even for manufacturing Bricks, the cost went up to Rs. 5000/- to Rs. 2500/- which is heavy. In respect of Black Granite or pink granitd, a small man who is having 1 to 5 acres will be affected and ultimately he has to surrender the material to the Govenment and nobody will accept that material. Granite is vastly available in every area. Even in Andhra Pradesh and Tamil Nadu, plenty of this material is available. Therefore, the Hon'ble Minister should consider regarding introduction of any kind of rayalties in the interest of the State.

ಶ್ರೀ ಎನ್. ಮಾಚೇಗೌಡ (ಮುಳಿಯಾಲ ದುರ್ಗ).— ಮಾನ್ಯ ಅಧ್ಯಕ್ಷರೇ, ಈಗ ನಮ್ಮ ವಂಶಪಾರಂಪರ್ಯ ಈ ಕಾನೂನನ್ನು ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ಚರ್ಚೆ ಆಲೋಚನೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ, ಈಗತಾನೆ ಮಾತನಾಡಿದ ಸ್ನೇಹಿತರು ಹೇಳಿದ ಹಾಗೆ ನೆಪಮಾತ್ರಕ್ಕೆ ರಾಯಲ್ಟಿ ಬರುತ್ತಿದೆ. ದಿವಸಕ್ಕೆ ಒಂದೊಂದು ಸಾವಿರ ರೂಪಾಯಿ ಸಂಪಾದನೆ ಮಾಡತಕ್ಕವರು ಇದರಲ್ಲಿ ಇದ್ದಾರೆ. ಇದರಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಇನ್ನು ಕೆಲವೆಡೆ ಸಾವಿರಗಟ್ಟಲೆ ಕಲ್ಲು ಸಾಗಿಸಿದರೂ ಲೆಕ್ಕ ಯಾರೂ ತೆಗೆದುಕೊಳ್ಳುವ ಹಾಗೇ ಇಲ್ಲ. ಹೀಗಾಗಿ ನಮ್ಮ ರಾಜ್ಯಕ್ಕೆ ಸಿಗಬೇಕಾದ ವರಮಾನವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ 5 ಕೋಟಿ ರೂಪಾಯಿ ಮೇಲೆ ಆದಾಯ ಸಿಗಬಹುದು ಎಂದು ಹೇಳಿದ್ದಾರೆ ಆದರೆ ಅದಕ್ಕೆ ಹೆಚ್ಚು ಸಿಬ್ಬಂದಿಯನ್ನು ಇಟ್ಟು ಪ್ರತಿದಿವಸ ಎಲ್ಲೆಲ್ಲಿ ಎಷ್ಟೆಷ್ಟು ಬರುತ್ತಿದೆ ಅದಕ್ಕೆ ಯಾವ ರೀತಿ ತೆರಿಗೆ ಹಾಕಬಹುದು, ಯಾವ ರೀತಿ ವರಮಾನ ಪೇಚಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕಾಗುತ್ತದೆ. ಇದರಲ್ಲಿ ಭೂಗರ್ಭ ಇಲಾಖೆಯ ಅಧಿಕಾರಿಗಳು ಕೊಟ್ಟಿರುವುದನ್ನು ನೋಡಿದರೆ, ಯಾವ ಯಾವ ರೀತಿ ವ್ಯವಹಾರ ನಡೆದಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಆ ಪರಿಸ್ಥಿತಿಯಲ್ಲಿದೆ. ಅವಕ್ಕಾಗಿ ನನ್ನ ಸಲಹೆ ಏನೆಂದರೆ ಇದಕ್ಕೆ ಸ್ವಲ್ಪ ತಜ್ಞರಾದಂಥ, ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ನೇಮಿಸಿ, ಇದರ ಬಗ್ಗೆ ಹೆಚ್ಚಿನ ಆಂಕೆ ಅಂಶಗಳನ್ನು ತರಿಸಿ, ಈ ವ್ಯವಹಾರವನ್ನು ಸರಕಾರಕ್ಕೆ ಲಾಭದಾಯಕವಾಗುವ ಹಾಗೆ ಮಾಡುವುದು ಒಂದು ವಿಷಯ. ಇನ್ನೊಂದು ವಿಷಯ ಏನೆಂದರೆ, ಈ ಆಸ್ತಿ ತಲೆತಲಾಂತರದವರೆಗೆ ಇರಬೇಕಾದಂಥ ಆಸ್ತಿ. ಇದು ಮುಗಿದುಹೋದ ಮೇಲೆ ಹೊಸದಾಗಿ ಉತ್ಪತ್ತಿ ಮಾಡತಕ್ಕ ಆಸ್ತಿ ಅಲ್ಲ. ಆದ ದರಿಂದ ಇದರ ಬಗ್ಗೆ ಸ್ವಲ್ಪ ಲಕ್ಷ್ಯ ಇಟ್ಟು ಇದು ಖರ್ಚಾಗುವುದಕ್ಕೆ ಮಿತಿ ಇಡಬೇಕು. ಹೊರಗಡೆ ಕಳಿಸಿಲಿ. ಬೇರೆ ವಿಧವಾದ ಆದಾಯ ಬರಲಿ. ಇದನ್ನು ಉಪಯೋಗಿಸುವುದರಲ್ಲಿ ಮಿತಿ ಇರಬೇಕು ಈ ಆಸ್ತಿ ತಲೆತಲಾಂತರದವರೆಗೆ ಉಳಿಯುವ ರೀತಿಯಲ್ಲಿ ಹತೋಟಿ ಇದಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಲಕ್ಷ್ಯಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಆದುದರಿಂದ ಈ ಬಿಲ್ಲನ್ನು ಅಧ್ಯಯನ ಮಾಡಿ ಒಂದು ಕ್ರಮವಾದ ಬಿಗುವಾದ ಕಾನೂನನ್ನು ಜಾರಿಗೆ ತರುವುದು ಅವಶ್ಯಕ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ (ನಂಜನಗೂಡು).— ಅಧ್ಯಕ್ಷರೇ, ಈ ಸಂಪತ್ತು ಏನಿದೆ, ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಆರ್ಥಿಕವಾಗಿ ಅನುಕೂಲವಾಗತಕ್ಕಂಥ ಸಂಪತ್ತು. ಇದರಲ್ಲಿ ಲೈಸೆನ್ಸ್ ಕೊಡುವಾಗ, ಕಾಂಟ್ರಾಕ್ಟ್ ಕೊಡುವಾಗ ಬೇಕಾದಷ್ಟು ಲೋಪದೋಷಗಳು ಆಗುತ್ತವೆ. ಇದರಿಂದ ಉತ್ಪತ್ತಿ ಕಂಡಿರತಕ್ಕಂಥ ಜನ ಏನು ಮಾಡುತ್ತಿದ್ದಾರೆ, ಅಂದರೆ, ನೆಪ ಮಾತ್ರಕ್ಕೆ 5-6 ಜನ ಸೇರಿ ಒಂದು ಸಂಘ ಎಂದು ಸ್ಥಾಪನೆ ಮಾಡಿ, ಆ ಸಂಘದ ಮುಖೇನ ಕಲ್ಲು ಸಾಗಾಣಿಕೆ ಮಾಡಿಕೊಂಡು ವೈಯಕ್ತಿಕವಾಗಿ ಲಾಭ ಪಡೆಯುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ ಈ ಸಂಪತ್ತು ಏನಿದೆ. ಈ ಸಂಪತ್ತಿನಿಂದ ಅನುಕೂಲ ಆಗಬೇಕಾದರೆ, ಸರಕಾರಕ್ಕೆ ಒಳ್ಳೆಯದು ಆಗಬೇಕಾದರೆ, ಒಂದು ಕಾರ್ಪೊರೇಷನ್ ನೇಮಿಸಿದರೆ ಬಹಳ ಅನುಕೂಲವಾಗುತ್ತದೆ. ಕಾರ್ಪೊರೇಷನ್ ನೇಮಿಸಿ ಸರಕಾರದ ಪರವಿಯಿಂದ ವ್ಯವಸ್ಥೆ ಮಾಡಿದರೆ ಆರ್ಥಿಕವಾಗಿ ನಮ್ಮ ಸರಕಾರಕ್ಕೆ ಅನುಕೂಲವಾಗುತ್ತದೆ. ಅದೇ ಸಂದರ್ಭದಲ್ಲಿ ಸಾವಿರಾರು ಜನಕ್ಕೆ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ. ಸರಕಾರಕ್ಕೂ ಲಾಭವಾಗುತ್ತದೆ. ಈ ಅಕ್ರಮಗಳು ಏನು ನಡೆಯುತ್ತಿವೆ, ಇದನ್ನು ತಪ್ಪಿಸಿದ ಹಾಗೂ ಆಗುತ್ತದೆ ಎಂದು ಸ್ಪಷ್ಟವಾಗಿ ಸರಕಾರಕ್ಕೆ ತಿಳಿಸುತ್ತಾ ಇದ್ದೇನೆ. ಲೈಸನ್ಸ್ ಕೊಡುವಾಗ ಇಲಾಖೆಯವರದ್ದು ನಿಯಮಗಳಿದ್ದರೂ ಅದರಲ್ಲಿ ಬೇಕಾದಷ್ಟು ಲೋಪದೋಷ ನಡೆಯುತ್ತಿದೆ. ಈ ಕಲ್ಲುಗಣಿಯನ್ನು ಸಾಕಾದಷ್ಟು ಹೊರಗಡೆ ಮಾರುತ್ತಿದ್ದಾರೆ. ಐದು ನೂರು ರೂಪಾಯಿಗೆ ಪಡೆದು 50ಸಾವಿರ ರೂಪಾಯಿ ಸಂಪಾದನೆ ಮಾಡತಕ್ಕಂಥ ಜನರಿದ್ದಾರೆ. ಈ ಅನ್ಯಾಯವನ್ನು ತಪ್ಪಿಸಬೇಕಾದರೆ, ಸರಕಾರಕ್ಕೆ ಆದಾಯ ಪಡೆಯಬೇಕಾಗಿದ್ದರೆ ದಯವಿಟ್ಟು ಸರಕಾರ ಇದರ ಬಗ್ಗೆ ಪರಿಶೀಲನೆ ಮಾಡಿ, ಬೇರೆ ಎಲ್ಲದ್ದಕ್ಕೂ ಕಾರ್ಪೊರೇಷನ್ ಮಾಡಿರುವ ಹಾಗೆ ಇದಕ್ಕೂ ಒಂದು ಕಾರ್ಪೊರೇಷನ್ ಮಾಡಿದರೆ ಅನುಕೂಲವಾಗುತ್ತದೆ. ಏತಕ್ಕೆಂದರೆ ಬೇರೆ ಕಾರ್ಪೊರೇಷನ್‌ಗಳು ಸಫ್ಟದಲ್ಲಿ ಕೆಲಸ ಮಾಡಿದರೂ. ಈ ಕಾರ್ಪೊರೇಷನ್ ನಷ್ಟದಲ್ಲಿ ಕೆಲಸ ಮಾಡುವುದಿಲ್ಲ. ಉತ್ಪತ್ತಿ ಹೆಚ್ಚು ಆಗುತ್ತದೆ, ಹಾಗೂ ಬಹಳ ಜನ ಬಡವರಿಗೆ ಕೆಲಸ ಕೊಟ್ಟ ಹಾಗೆ ಆಗುತ್ತದೆಂದು ತಮ್ಮ ಮುಖೇನ ಸಲಹೆ ಕೊಡುತ್ತಿದ್ದೇನೆ.

ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ). — ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಖನಿಜ ಸಂಪತ್ತಗಳನ್ನು ಪಡೆಯುವುದಕ್ಕಾಗಿ ಭೂ ಗರ್ಭ ಇಲಾಖೆ ಲೈಸೆನ್ಸ್ ಕೊಡುತ್ತದೆ. ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಸಂಬಂಧವೂ ಇಲ್ಲ. ಆದರೂ ರಾಜ್ಯ ಸರ್ಕಾರ ಈ ದೃಷ್ಟಿಯಲ್ಲಿ ಯೋಜನೆ ಮಾಡಿರುವುದು ಸ್ವಾಗತಾರ್ಹವಾದುದು. ಇದರಿಂದ ರಾಜ್ಯಕ್ಕೆ ಹೆಚ್ಚು ಹಣ ಬರುವುದಕ್ಕೆ ಅನುಕೂಲವಾಗುತ್ತದೆ. ಕನಕಪುರದಲ್ಲಿ ಒಂದು ರೈತ ಸಂಘ ಇದೆ. ಅಲ್ಲಿರತಕ್ಕ ಬೆಲೆ ಬಾಳತಕ್ಕ ಬ್ಲೂ ಕಲ್ಲನ್ನು ಆ ಸಂಘದವರು ಕ್ರಯಮಾಡಿ, ಸರ್ಕಾರಕ್ಕೆ ರಾಯಲ್ಟಿ ರೂಪದಲ್ಲಿ 15ರೂಪಾಯಿ ಕೊಡುತ್ತಿದ್ದಾರೆ. ಆದನ್ನು 125ರೂಪಾಯಿಗೆ ಮಾರುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಸುಮಾರು 6ಲಕ್ಷ ರೂಪಾಯಿ ಹೋಗುತ್ತಿದೆ. ಅಪವ್ಯಯವಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಮಾಡಿರತಕ್ಕ ಪ್ರಯತ್ನ ಬಹಳ ಒಳ್ಳೆಯದು ಇದೆ. ಮಧ್ಯವರ್ತಿಗಳು ಯಾರೇ ಇರಲಿ, ಅವರ ಬಗ್ಗೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದು ಕೊಂಡು ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವರದೇಗೌಡ(ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ,ಕನಕಪುರ ತಾಲ್ಲೂಕಿನಲ್ಲಿ ಬಹಳ ಬೆಲೆ ಬಾಳತಕ್ಕ ಕಲ್ಲು ಸಿಗುತ್ತದೆ ಅದೇ ರೀತಿ ಮಾಗಡಿಯಲ್ಲೂ ಕೂಡ ಉತ್ತಮವಾದ ಕಲ್ಲುಗಳು ಸಿಗುತ್ತವೆ. ಇದರ ವ್ಯವಹಾರದಲ್ಲಿ ಕೆಲವರು ಮಧ್ಯವರ್ತಿಗಳು ಸೇರಿಕೊಂಡು ಅನ್ಯಾಯವಾಗಿ ಹಣ ಸುಪಾಡನೆ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕೆಂಪು ಅರಳು ಸಿಗುತ್ತದೆ ಆ ಪ್ರದೇಶವನ್ನು 50-60 ವರ್ಷಗಳವರೆಗೆ ಬ್ಲಾಕಿಗೆ ಗುತ್ತಿಗೆ ಕೊಟ್ಟಿದ್ದಾರೆ. ಇದನ್ನು ತಪ್ಪಿಸಿ ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಬೇಕು, ಅಲ್ಲದೆ ಮಾನ್ಯ ಚೌಡಯ್ಯನವರು ಮತ್ತು ಮಾನ್ಯ ಚನ್ನಪ್ಪನವರು ಹೇಳಿದಂತೆ ಆಯಾಯಾ ಪಂಚಾಯ್ತಿಗಳಿಗೆ ಅಥವಾ ಮುನಿಸಿಪಾಲಿಟಿಗಳಿಗೆ ಆದಾಯ ಬರುವಂಥಹ ರೀತಿಯಲ್ಲಿ ಕಾನೂನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಕೆಂಪೇಗೌಡ (ಚಾಮರಾಜ) — ಮಾನ್ಯ ಮಂತ್ರಿಯವರು ತಂದಿರುವ ಮಸೂದೆಯನ್ನು ಸ್ವಾಗತ ಮಾಡುತ್ತಾ, ಹಿಂದೆ ಸರ್ಕಾರದವರು ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳ ಆದಾಯ ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಕಟ್ಟಡಗಳಿಗೆ ಸಂಬಂಧಪಟ್ಟ ಕಲ್ಲುಗಳ ಪರಿವಾಟನ್ನು ಕೊಡಬೇಕೆಂದು ಹೇಳಿದ್ದರು ಕಳೆದ ಹತ್ತು ವರ್ಷಗಳ ಅಂಕಿ ಸಂಖ್ಯೆಗಳನ್ನು ನೋಡಿದರೆ ಸರ್ಕಾರಕ್ಕೆ 30-35 ಲಕ್ಷ ರೂಪಾಯಿ ಮಾತ್ರ ಆದಾಯ ಬಂದಿದೆ ಪಂಚಾಯ್ತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟರೆ ಅವುಗಳ ಆದಾಯವು ಹೆಚ್ಚಾಗುತ್ತದೆ. ಸರ್ಕಾರ ಇದನ್ನು ಪ್ರಸಗಂಡು ಕಟ್ಟಡಗಳಿಗೆ ಸಂಬಂಧಪಟ್ಟ ಗ್ರಾನೈಟ್ ಕ್ವಾರೀಸ್‌ನ ವ್ಯವಹಾರವನ್ನು ಆಯಾಯಾ ಮಂಡಲ ಪಂಚಾಯ್ತಿಗಳಿಗೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ 7 ಜನ ಮಾನ್ಯ ಸದಸ್ಯರುಗಳು ಪಾತಸಾಧಿ ಸದ್ಭಾವನೆಯಿಂದ ಕೂಡಿದಂಥ ಅಭಿಪ್ರಾಯಗಳನ್ನು ಹಾಗೂ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಅವುಗಳೆಲ್ಲವನ್ನೂ ಸ್ವಾಗತ ಮಾಡುತ್ತೇವೆ. ಮಾನ್ಯ ಚೌಡಯ್ಯನವರು

ಆಯಾಯಾ ಕ್ಷೇತ್ರದಲ್ಲಿರತಕ್ಕ ಮುಂಡಲ್ ಪಂಚಾಯ್ತಿಗಳಿಗೆ ಮತ್ತು ಜಿಲ್ಲಾಪರಿಷತ್ತುಗಳಿಗೆ ವಹಿಸಿದರೆ ನೈಸರ್ಗಿಕವಾಗಿ ಬಂದಂತ ಸಂಪತ್ತು; ಹಾಗೂ ಪ್ರಕೃತಿದತ್ತವಾಗಿ ಬಂದಂತ ಸಂಪತ್ತು ಆಯಾಯಾ ಪ್ರದೇಶ ಅಭಿವೃದ್ಧಿಗೆ ಅನುಕೂಲವಾಗುತ್ತದೆಂದು ತಿಳಿಸಿದ್ದಾರೆ. ಇದನ್ನು ಕಾನೂನಿನಲ್ಲಿ ಅಳವಡಿಸತಕ್ಕ ಪ್ರಯತ್ನ ನಡೆದಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದೇ ಮಾನ್ಯ ಕೆಂಪೇ ಗೌಡರು ಪುನರುಚ್ಚರಿಸಿದ್ದಾರೆ. ಮುಂದೆ ನ್ಯಾಯ ಪಂಚಾಯ್ತಿ ಮತ್ತು ಜಿಲ್ಲಾಪರಿಷತ್ತು ಮಸೂದೆ ಬರುತ್ತದೆ. ಆ ಸಂದರ್ಭದಲ್ಲಿ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಸೇರಿಸಿಕೊಳ್ಳುವುದರಿಂದ, ತಮ್ಮ ಸಲಹೆಗಳು ಮತ್ತು ಭಾವನೆಗಳು ಫಲಕಾರಿಯಾಗುತ್ತೆ, ಹಾಗೂ ಸಫಲವಾಗುತ್ತದೆಂದು ಭಾವಿಸುತ್ತೇನೆ. ಸೊಂಡೂರಿನ ಮಾನ್ಯ ಸದಸ್ಯರು ಕಳೆದ 4–5 ವರ್ಷಗಳಿಂದ ಬಂದಿರತಕ್ಕ ಆದಾಯದ ಅಂಕಿ ಸಂಖ್ಯೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಪೂರ್ಣ ಮಾಹಿತಿ ಒದಗಿಸಿಕೊಡುತ್ತೇನೆಂದು ಹೇಳುತ್ತೇನೆ. ಮತ್ತೆ ಸಾಮಾನ್ಯ ಜನರು ಈ ವೃತ್ತಿಯಲ್ಲಿರುವವರೆಗೆ ತೆರಿಗೆಯಿಂದ ಹೊರೆ ಜಾಸ್ತಿಯಾಗುತ್ತದೆಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ವಿನಾಯ್ತಿ ಕೊಡುವುದಕ್ಕೆ ಸಾಧ್ಯವಿದ್ದರೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ. ಇನ್ನು ಮಾನ್ಯ ಹಿರಿಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಪ್ರಕೃತಿದತ್ತವಾಗಿ ಬಂದಂಥ ಸಂಪತ್ತಿನ ಮೇಲೆ ಸರ್ಕಾರದ ನಿಯಂತ್ರಣ ಇರಬೇಕೆಂಬ ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು ನಮಗೆ ಪ್ರಕೃತಿದತ್ತವಾಗಿ ಬಂದಿರುವಂಥ ಕಲ್ಲು, ಬಂಡೆ ಖನಿಜ ಸಂಪತ್ತು ಉಳಿಸಿಕೊಳ್ಳಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ. ಸದಾಕಾಲವೂ ಇದನ್ನು ಕಬಳಿಸುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಸರ್ಕಾರ ಇದರ ಬಗ್ಗೆ ವಿಶೇಷ ಗಮನ ಕೊಡುತ್ತದೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಇದು ಸಾನ್ ರಿಮೂವಬಲ್ ರಿಸೋರ್ಸ್. ಇದನ್ನು ರಫ್ತು ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇಲ್ಲಿ ತೆಗೆದುಕೊಂಡು ಹೋದಂಥ ಮಾಲಿಗೆ ಪಾಲಿಷ್ ಹಾಕಿ, ದುಬಾರಿ ಬೆಲೆಗೆ ಮಾರಾಟ ಮಾಡಿ ಹೆಚ್ಚು ಹಣ ಸಂಪಾದನೆ ಮಾಡುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಮುದ್ದಕ್ಕನ ಹಳ್ಳಿ ಎಂದು ಇದೆ. ಅಲ್ಲಿ ವಿಶೇಷ ರೀತಿಯ ಕಲ್ಲುಗಳು ದೊರೆಯುತ್ತವೆ. ಅಲ್ಲಿನ ಕಲ್ಲುಗಳಿಗೆ ಅಪಾರವಾದ ಬೇಡಿಕೆ ಇರುವುದರಿಂದ ಸರ್ಕಾರದವರೇ ಒಂದು ಏಜನ್ಸಿ ಮುಖಾಂತರ ಕಲ್ಲುಗಳಿಗೆ ಪಾಲಿಷ್ ಕೊಟ್ಟು ಮಾರಾಟ ಮಾಡಿದರೆ ಹೆಚ್ಚು ದುಡ್ಡು ಸರ್ಕಾರಕ್ಕೆ ಬರುತ್ತೆ. ರಫ್ತು ಮಾಡುವಂತಾದ್ದು ಕಳೆದ 5-6 ವರ್ಷದಿಂದ ಜಾಸ್ತಿಯಾಗಿದೆ. ಇದನ್ನು ಕಡಿಮೆ ಮಾಡುವುದಕ್ಕಾದರೂ ಸರ್ಕಾರದವರು ನಿಗಾ ಕೊಡಬೇಕೆಂದು ಹೇಳುತ್ತೇನೆ. ಮಾಗಡಿಯಲ್ಲಿ ಕೂಡ ಉತ್ತಮವಾದ ಕಲ್ಲುಗಳು ದೊರೆಯುತ್ತವೆ. ಅಲ್ಲಿ ಬಹಳ ವರ್ಷದಿಂದ ಬ್ಲಾಕ್ ಗ್ರಾನೈಟ್ ಇದೆ. ಬಹಳ ಶ್ರೇಷ್ಟವಾದುದು. ಕೆಲವು ಅಧಿಕಾರಿಗಳಿಗೆ ಆಸಕ್ತಿ ಇರಬಹುದು, ಕೆಲವರಿಗೆ ಇಲ್ಲದೇ ಇರಬಹುದು. ಸರ್ಕಾರದವರು ಇದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಇದರ ಮೇಲೆ ಸಾಕಷ್ಟು ನಿಯಂತ್ರಣ ಇಟ್ಟುಕೊಂಡಿರಬೇಕು. ಪ್ರಕೃತಿದತ್ತವಾದ ಸಂಪತ್ತನ್ನು ಪೋಲು ಮಾಡುವುದಕ್ಕೆ ಬಿಡಬಾರದು ಎಂದು ಹೇಳಿದರು. ಮಿತಿಯೊಳಗೆ ವಿತರಣೆ ಮಾಡಬೇಕೆಂಬುದು ಒಂದು ವಾದವಾದರೆ ಮೂಲಭೂತವಾಗಿ ಪ್ರಕೃತಿದತ್ತವಾದ ಸಂಪತ್ತನ್ನು ಒಂದು ಹಿಡಿತದಲ್ಲಿ ಇಟ್ಟುಕೊಂಡಿರಬೇಕು ಎಂಬುದು ಮತ್ತೊಂದು ವಾದ. ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಒಬ್ಬಿಂದಿ ವರ್ಗದವರೆಲ್ಲ ಜವಾಬ್ದಾರಿಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕವರು ಆಗಬೇಕು, ಲಾಭದಾಯಕವಾಗಿ ಕೆಲಸ ಮಾಡತಕ್ಕ ರೀತಿಯಲ್ಲಿ ....

ಒಬ್ಬ ಮಾನ್ಯ ಸದಸ್ಯರು.— ಐ.ಎ.ಎಸ್. ಅಧಿಕಾರಿಗಳನ್ನು ಹಾಕುವುದಕ್ಕಿಂತ ಬದಲು ಟೆಕ್ನಿಕಲ್ ಹ್ಯಾಂಡ್ಸ್‌ನ್ನು ನೇಮಿಸಿದರೆ ಒಳ್ಳೆಯದು.

ಶ್ರೀ ಎ ಲಕ್ಷ್ಮೀಸಾಗರ್.— ಆಗಬಹುದು. ಭೂಗರ್ಭಶಾಸ್ತ್ರಜ್ಞರು ವಿಶೇಷ ಪ್ರಾವೀಣ್ಯತೆ ಪಡೆದವರನ್ನು ಹಾಕುವುದು ಒಳ್ಳೆಯದೆಂಬ ಸಲಹೆ ಚೆನ್ನಾಗಿದೆ, ಸ್ವಾಗತಿಸುತ್ತೇನೆ. ಒಳ್ಳೆಯ ಜನರು, ಚೆನ್ನಾಗಿ ಕೆಲಸ ಮಾಡತಕ್ಕವರು ಇರಬೇಕು ಎಂಬುದನ್ನು ಒಪ್ಪುತ್ತೇನೆ. ಸಮಸ್ತ ದೇಶದ ಮಣ್ಣಿನಲ್ಲಿ ಹುಟ್ಟಿದವರ ಹಿತ ಕಾಪಾಡಿಕೊಂಡು ಬರಬೇಕೆಂಬ ಇಚ್ಛಾಶಕ್ತಿ ಇರಬೇಕೆಂಬ ನಿಮ್ಮ ಅಭಿಪ್ರಾಯ ಚೆನ್ನಾಗಿದೆ. ಅದನ್ನು ಅಳವಡಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಮಹದೇವ್ ಅವರು ಕಾರ್ಪೊರೇಷನ್ ಅನ್ನು ಮಾಡಬೇಕೆಂದು ಹೇಳಿದ್ದಾರೆ. ಈಗಿನ ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡ ತ್ತಿಲ್ಲವೆಂದು ಹೇಳಿದ ಮಾನ್ಯ ಮಹದೇವ್ ಅವರು ಪತ್ತೆಯೇ ಇಲ್ಲ. ಅದು ಇರಲಿ. ಸರಕಾರಕ್ಕೆ ಇದರಿಂದ ಲಾಸ್ ಆಗಬಹುದು. ಆದರೂ ಅವರ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳೋಣ. ಇನ್ನು ಮಾನ್ಯ ರಾಮಚಂದ್ರರಾಮರು ಇದನ್ನು ಸ್ವಾಗತ ಮಾಡಿದ್ದರೆ

ಶ್ರೀ ವರದೇಗೌಡರು ಮಧ್ಯವರ್ತಿಗಳು ಇದ್ದಾರೆಂದು ಹೇಳಿದ್ದಾರೆ. ಮಧ್ಯವರ್ತಿಗಳು ಎಲ್ಲ ಕಡೆಯೂ ಇದ್ದಾರೆ, ಅವರು ಸರ್ವಾಂತರ್ಯಾಮಿಗಳು. ಆದರೂ ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಇದೇ ರೀತಿ, ಇನ್ನೂ ಅನೇಕ ಸಾಧುವಾದ ಸಲಹೆಗಳು ಬಂದಿವೆ. ಅವನ್ನೆಲ್ಲ ಗಮನದಲ್ಲಿಟ್ಟುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಎನ್. ಜಿ. ನಾಯಕ್.— ನಮ್ಮ ಕರ್ನಾಟಕ ರಾಜ್ಯದಲ್ಲಿರುವಷ್ಟು ಖನಿಜ ಸಂಪತ್ತು, ವನ ಸಂಪತ್ತು ಇಂಡಿಯಾ ದೇಶದಲ್ಲಿ ಎಲ್ಲಿಯೂ ಇಲ್ಲ. ಇದು ಖನಿಜ ಸಂಪತ್ತಿನ ನಾಡು. ಈ ನಾಡನ್ನು ಏನು ಮಾಡಿದ್ದಾರೆಂದರೆ, ಇಲ್ಲಿ ಸಿಕ್ಕಿದ ಹಾಗೆ ಲೈಸೆನ್ಸ್ ಕೊಟ್ಟು ಅರಣ್ಯ ಸಂಪತ್ತನ್ನೆಲ್ಲ ಹಾಳು ಮಾಡಿದ್ದಾರೆ. ಅರಣ್ಯದಲ್ಲಿ ವನ್ಯಮೃಗಗಳು ಇಲ್ಲದಂತಾಗಿವೆ. ನಮ್ಮ ನಾಡಿನಲ್ಲಿ ಖನಿಜ ಸಂಪತ್ತು ಎಷ್ಟಿದೆ ಎಂದರೆ, ಇನ್ನು ನೂರಿನ್ನೂರು ವರ್ಷಗಳು ಕಳೆದರೂ ಅದು ಮುಗಿಯುವುದಿಲ್ಲ. ಕರ್ನಾಟಕ ದೇಶದ ಜನರು ತಜ್ಞರಿದ್ದಾರೆ. ಅವರಿಗೆ ಎಲ್ಲೆಲ್ಲಿ ಖನಿಜ ಸಂಪತ್ತು ಇದೆ ಎಂಬುದು ಗೊತ್ತಿದೆ, ಅದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ನಾವು ನತದೃಷ್ಟರು. ಏಕೆಂದರೆ ನಮ್ಮಲ್ಲಿ ಯಾರೂ ಸರಿಯಾದವರು ಇಲ್ಲ. ಅದೇ ಇಂಗ್ಲೀಷಿನವರು ಇದ್ದಿದ್ದರೆ ಅಮೇರಿಕಾದವರನ್ನು ಮೀರಿಸಬಹುದಾಗಿತ್ತು. ಆದರೆ ಅಂಥ ಜನರು ನಮ್ಮಲ್ಲಿ ಇಲ್ಲ. ಆದ್ದರಿಂದ, ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇನ್ನು ಮೇಲಾದರೂ ಕೂಡ ಈ ಸಂಪತ್ತನ್ನು ಆಯಾಯ ತಾಲ್ಲೂಕುಗಳ ಮುನಿಸಿಪಾಲಿಟಿಗಳಿಗೆ ವಹಿಸಿಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ ಮುನಿಸಿಪಾಲಿಟಿಗಳಿಗೆ ಸಂಬಳ ಕೊಡುವುದಕ್ಕೆ ಹಣ ಇಲ್ಲ. ಆದ್ದರಿಂದ ಮುನಿಸಿಪಾಲಿಟಿಗಳಿಗೆ ವಹಿಸಿದರೆ ಖಂಡಿತ ನಾವು ಉದ್ಧಾರವಾಗುತ್ತೇವೆ. ಅಂಥದಕ್ಕೆ ಅವಕಾಶ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತೊಂದು ಮಾತು ಹೇಳುವುದೇನೆಂದರೆ, ಬೇರೆ ಯಾರಿಗೂ ಇದನ್ನು ಕೊಡದೆ ಸರ್ಕಾರದವರೇ ಜವಾಬ್ದಾರಿ ತೆಗೆದುಕೊಂಡು ಮಾಡಿದರೆ ಖಂಡಿತ ನಮ್ಮ ನಾಡು ಉಳಿಯುತ್ತದೆ. ಬೇರೆಯವರಿಗೆ ಕೊಟ್ಟರೆ ಖಂಡಿತ ಹಾಳಾಗುತ್ತದೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ನಾಯಕ್‌ರವರು ಮಾತನಾಡಿದ್ದು ಏನು ಎಂದು ನಮಗೆ ತಿಳಿಯಲಿಲ್ಲ. ಆದ್ದರಿಂದ ತಾವು ನಮಗೆ ತಿಳುವಳಿಕೆ ಕೊಡಬೇಕು.

ಅಧ್ಯಕ್ಷರು.— ಮುನಿಸಿಪಾಲಿಟಿಗಳಿಗೆ ಅರಣ್ಯ ಸಂಪತ್ತನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಅಧಿಕಾರ ಕೊಡಿ ಎಂದು ಹೇಳಿದ್ದಾರೆ.

ಶ್ರೀ ಜಿ. ಪಿ. ಒಡೆಯರಾಜ್.— ಈ ವಿಧೇಯಕದ ಉದ್ದೇಶಗಳನ್ನು ಸ್ಪಷ್ಟೀಕರಿಸುತ್ತಾ ಮಂತ್ರಿಗಳು ಏನು ಹೇಳಿದ್ದು ಎಂದರೆ ಎಕ್ಸ್‌ಪೋರ್ಟ್ ಮಾಡಿದವರಿಗೆ ತೆರಿಗೆ ಹಾಕುತ್ತೇವೆಂದು ಹೇಳಿದ ಹಾಗೆ ಆಯಿತು, ಮತ್ತು ಸವಿಸ್ತಾರವಾಗಿ ಮಾತನಾಡುವ ಆಸಕ್ತಿ ಇಲ್ಲವೆಂದು ಹೇಳಿದ ಹಾಗೆ ಆಯಿತು. ಬಜೆಟ್ ಭಾಷಣವನ್ನು ನೋಡಿದ ಮೇಲೆ ಆಶ್ಚರ್ಯವಾಗಿತ್ತು. ಆದರೆ ಆಸ್ಪತ್ರೆಯಲ್ಲಿ ನಮ್ಮನ್ನು ಮಾತನಾಡಲು ಕರೆದಿದ್ದರಿಂದ ಪರವಾಗಿಲ್ಲ. ಇದರ ಮೇಲೆ ತೆರಿಗೆ ವಿಧಿಸತಕ್ಕದ್ದು ಒಂದು ವೇಳೆ ವ್ಯಾಪಾರ ಕೊಳ್ಳಲಿಕ್ಕರವಾಗಿದ್ದರೆ ತಾವು ಏನು ವಿಧಿಸುತ್ತೀರಿ ಅದು ರಾಜ್ಯದ ಬೊಕ್ಕಸಕ್ಕೆ ನೇರವಾಗಿ ಬರತಕ್ಕ ವ್ಯವಸ್ಥೆ ಮಾಡಬೇಕು. ಆದರೆ ಈ ಉದ್ಯೋಗದಲ್ಲಿ ಬೋವಿಗಳು, ಹರಿಜನರು, ಒಕ್ಕಲಿಗರು ತೊಡಗಿದ್ದಾರೆ ಅವರು ಸಂಘಗಳನ್ನು ಮಾಡಿಕೊಂಡು ಅಥವಾ ಒಬ್ಬೊಬ್ಬರೇ ಪ್ರತ್ಯೇಕವಾಗಿ ಕ್ವಾರಿ ಲೈಸೆನ್ಸ್ ಪಡೆಯುತ್ತಿದ್ದಾರೆ ಅವರು ಕೂಲಿಗಾರರು ಆಗಿರುವುದರಿಂದ ಅವರೇ ಉದ್ಯೋಗದಲ್ಲಿ ತೊಡಗಿರುವುದರಿಂದ ಅವರಿಗೆ ಈ ಕೆಲಸವೇ ಜೀವನೋಪಾಯವಾಗಿರುವುದರಿಂದ ಅವರು ಸಂಘ ಸಂಸ್ಥೆಗಳನ್ನು ಮಾಡಿಕೊಂಡಿದ್ದರೆ ಅವರಿಗೆ ಈ ತೆರಿಗೆಯಲ್ಲಿ ವಿನಾಯಿತಿ ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ರಾಯಲ್ಟಿ ಕೂಡ ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಅದನ್ನು ಖಂಡಿತ ಪರಿಶೀಲನೆ ಮಾಡುತ್ತೇವೆ. ಮಾನ್ಯ ಸದಸ್ಯರು ಈ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ. – ಹಾಲಿ ಕೊಟ್ಟಿರತಕ್ಕ ಲೈಸೆನ್ಸ್ ಏನಿದೆ ಅದು ವರ್ಷಾನುಗಟ್ಟಲೆ ಇರತಕ್ಕದ್ದಾಗಿದೆ. ಆದ್ದರಿಂದ, ಹೊಸ ಕಾನೂನು ಬರುವಾಗ ಅವೆಲ್ಲ ರದ್ದಾಗಿ ಮತ್ತೆ ಹೊಸದಾಗಿ ಕೊಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri A. Lakshmi Sagar.— They are all renewable licences and at the time of every such renewal they will go into the matter whether or not a particular licence and his licence is renewable or not. Certainly it will be taken into consideration.

Mr. Speaker.— The question is:

"That the Karnataka Mineral Rights Tax Bill, 1984, be taken into consideration."

The Motion was adopted.

Mr Speaker.— The question is :

Clause by Clause consideration

Mr. Speaker.— The question is :

"That Clauses 2 to 8 (both inclusive) and the Schedule do stand part of the Bill,"

The Motion was adopted

Clauses 2 to 8 (both inclusive) and the Schedule were added to the Bill.

Clause 1 etc.

Mr. Speaker.— The question is :

"That Clause 1, the Long Title, the Preamable and enacting formula do stand part of the Bill."

The Motion was adopted.

Clause 1, the Long Title. the Preamble and the enacting formula were added to the Bill.

Motion to pass

Sri A. Lakshmi Sagar.— Sir, I beg to move :

"That the Karnataka Mineral Rights Tax Bill, 1984, be passed.

Mr. Speaker.— The question is :

"That the Karnataka Mineral Rights Tax Bill, 1984, be passed."

The Motion was adopted and the Bill was passed.

The Karnataka Advocates Welfare Fund Bill, 1983

Motion to consider

Sri A. Lakshmi Sagar (Minister for Law and Parliamentary Affairs and Housing) — Sir, I beg to move :

"That the Karnataka Advocates Welfare Fund Bill, 1983, be taken into consideration as required under Rule 108 of the Rules of Procedure."

The question was proposed

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಅಧ್ಯಕ್ಷರೇ, ಮೇಲ್ಮನೆಯಲ್ಲಿ ಕ್ಲಾಸ್–76ಎ ಬಗ್ಗೆ ಚರ್ಚೆಯಾಗಿ ಅದರಲ್ಲಿ ಸಿವಿಲ್ ಅಪೀಲ್ಸ್ ಮತ್ತು ಕ್ರಿಮಿನಲ್ ಅಪೀಲ್ಸ್ ಮೇಲೆ ಮೊತ್ತದ ಆಧಾರದ ಮೇಲೆ ತೆರಿಗೆ ವಿಧಿಸತಕ್ಕದ್ದು ಸರಿಯಾಗಿಲ್ಲ. ತೆರಿಗೆ ಭಾರ ಜಾಸ್ತಿಯಾಗುತ್ತದೆಂಬ ಮುಖ್ಯವಾದ ವಾದವನ್ನು ಇಟ್ಟರು.

ನಾನು ಅವರ ತಿದ್ದುಪಡಿಗೆ ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಇದನ್ನು ಅವರು ವಿಜಿಕ್ಟ್ ಮಾಡಿದ್ದಾರೆ ಆದ್ದರಿಂದ ನಾನೇ ಇದಕ್ಕೆ ತಿದ್ದುಪಡಿ ತಂದಿದ್ದೇನೆ. ಅದರ ಪ್ರಕಾರ ಇಲ್ಲಿ ಡಿಲಿಟ್ ಆಗತಕ್ಕದ್ದು ಏನೆಂದರೆ "... one percent of the amount involved in the dispute in cases where it is capable of valuation and in other cases at a rate not exceeding'....'. ಇಷ್ಟು ಭಾಗ ತಗೆದ. ಈಗ ತಿದ್ದುಪಡಿಯಾದಂಥ ಕ್ಲಾಸ್ 76–ಎಯನ್ನು ಓದಬಹುದು. ಅದು ಈ ರೀತಿ ಇರುತ್ತದೆ.

"Notwithstanding anything contained in this Act or any other law for the time being in force, it shall be competent for the State Government to levy an additional Court-fee, by notification, in respect of appeals or revisions to tribunals or appellate